**213 (NS)**

# ಕರ್ನಾಟಕ ಮುಕ್ತ ಶಾಲೆಗಳ ಪರೀಕ್ಷೆ, ಜೂನ್, 2016

# Karnataka Open School Examination, June, 2016

## ಸಮಾಜ ವಿಜ್ಞಾನ

## SOCIAL SCIENCE

**(ಹೊಸ ಪಠ್ಯಕ್ರಮ)**

**( New Syllabus )**

ದಿನಾಂಕ : 24. 06. 2016 ]

Date : 24. 06. 2016 ]

ಸಮಯ : ಮಧ್ಯಾಹ್ನ 2.00 ರಿಂದ 5.00 ರವರೆಗೆ ] [ ಪರಮಾವಧಿ ಅಂಕಗಳು : 100

Time : 2.00 P.M. to 5.00 P.M. ] [ Maximum Marks : 100

***ಸೂಚನೆಗಳು :*** i) ಬರವಣಿಗೆ ಅಂದವಾಗಿರಲಿ.

ii) ಉತ್ತರಗಳು ಪ್ರಶ್ನೆಗಳಿಗೆ ಸಮರ್ಪಕವಾಗಿರಲಿ.

iii) ಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

iv) ಪ್ರಶ್ನೆ ಪತ್ರಿಕೆಗಳ ಮೇಲೆ ಉತ್ತರಗಳನ್ನು ಬರೆಯಬಾರದು.

I. ಈ ಕೆಳಕಂಡ ವಾಕ್ಯಗಳಲ್ಲಿ ಖಾಲಿ ಬಿಟ್ಟಿರುವ ಜಾಗವನ್ನು ಸೂಕ್ತ ಉತ್ತರದಿಂದ ತುಂಬಿ : $8 \times 1 = 8$

1) ವಿಶ್ವಸಂಸ್ಥೆಯು ಮಾನವ ಹಕ್ಕುಗಳನ್ನು ಘೋಷಣೆ ಮಾಡಿದ ವರ್ಷ .............................. .

2) ಭಾರತದಲ್ಲಿ ವಯಸ್ಕ ಮತದಾನ ಪದ್ಧತಿಗೆ ಇರಬೇಕಾದ ಕನಿಷ್ಠ ವಯೋಮಿತಿ ......................... .

3) ವರದಕ್ಷಿಣಾ ನಿಷೇಧ ಕಾನೂನು ಜಾರಿಗೆ ಬಂದ ವರ್ಷ .............................. .

4) ಭಾರತದಲ್ಲಿ ಅತ್ಯಂತ ಕಡಿಮೆ ಜನಸಾಂದ್ರತೆಯನ್ನು ಹೊಂದಿರುವ ರಾಜ್ಯ .............................. .

5) ಭಾರತದ ಅತ್ಯಂತ ದಕ್ಷಿಣದ ತುದಿಯನ್ನು .............................. ಎಂದು ಕರೆಯುವರು.

6) 'ಮೆಸಪಟೋಮಿಯನ್ನ'ರ ಬರವಣಿಗೆಯನ್ನು ಹೀಗೆ ಕರೆಯುವರು .............................. .

7) ಬೇಸಿಗೆ ಕಾಲದಲ್ಲಿ ಕರ್ನಾಟಕ ಮತ್ತು ಕೇರಳದಲ್ಲಿ ಬೀಳುವ ಮಳೆಯನ್ನು .............................. ಎಂದು ಕರೆಯುತ್ತಾರೆ.

8) ಕೈಗಾರಿಕಾ ಕ್ರಾಂತಿಯು ಮೊದಲು ಪ್ರಾರಂಭಗೊಂಡ ದೇಶ .............................. .

II. ಈ ಕೆಳಗೆ ಕೊಟ್ಟಿರುವ ಮೊದಲ ಜೋಡಿಯ ಸಂಬಂಧವನ್ನು ಗ್ರಹಿಸಿ, ಎರಡನೆಯ ಜೋಡಿಯಲ್ಲಿ ಖಾಲಿ ಬಿಟ್ಟಿರುವ ಪದವನ್ನು ಬರೆಯಿರಿ: $3 \times 1 = 3$

9) ಪ್ರಧಾನ ಮಂತ್ರಿಯ ನೇಮಕ : ರಾಷ್ಟ್ರಪತಿ :: ಮುಖ್ಯಮಂತ್ರಿಯ ನೇಮಕ : ............................ .

10) ಭಾಕ್ರಾನಂಗಲ್ : ಸಟ್ಲೇಜ್ :: ಹಿರಾಕುಡ್ : ............................ .

11) ಕುಶಾನರ ಸುಪ್ರಸಿದ್ಧ ದೊರೆ : ಕಾನಿಷ್ಕ :: ಮೌರ್ಯರ ಸುಪ್ರಸಿದ್ಧ ದೊರೆ : ............................ .

III. ಈ ಕೆಳಗಿನ ಘಟನೆಗಳನ್ನು ಕಾಲಾನುಕ್ರಮದಲ್ಲಿ ಬರೆಯಿರಿ : $4 \times 1 = 4$

12) ಕ್ವಿಟ್ ಇಂಡಿಯಾ ಚಳುವಳಿ

13) ಮಾರ್ಲೆ–ಮಿಂಟೋ ಸುಧಾರಣೆ

14) ದಂಡಿ ಸತ್ಯಾಗ್ರಹ

15) ಎರಡನೇ ದುಂಡು ಮೇಜಿನ ಸಭೆ

IV. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೂ ***ಒಂದೊಂದು*** ವಾಕ್ಯದಲ್ಲಿ ಉತ್ತರಿಸಿ : $5 \times 1 = 5$

16) ಶೀತಲ ಸಮರ ಎಂದರೇನು ?

17) ಸುಭಾಷ್‌ಚಂದ್ರ ಬೋಸರು ಸಿಪಾಯಿಗಳಿಗೆ ಏನೆಂದು ಕರೆ ನೀಡಿದರು ?

18) ಪ್ರಪಂಚದ ಅತ್ಯಂತ ಎತ್ತರವಾದ ಶಿಖರ ಯಾವುದು ?

19) ಭಾರತಕ್ಕೆ ಸೇರಿದ ದ್ವೀಪ ಸಮೂಹಗಳನ್ನು ಹೆಸರಿಸಿ.

20) ಸುಖೀರಾಜ್ಯ ಎಂದರೇನು ?

V. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ ***ಎರಡು–ಮೂರು*** ವಾಕ್ಯಗಳಲ್ಲಿ ಉತ್ತರಿಸಿ : $15 \times 2 = 30$

21) ವಿದೇಶಾಂಗ ನೀತಿಯ ಪ್ರಮುಖ ಉದ್ದೇಶಗಳು ಯಾವುವು ?

22) ನಾವು ಪರಿಸರ ಸಂರಕ್ಷಣೆಯನ್ನು ಹೇಗೆ ಮಾಡಬಹುದು ?

23) ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

24) ರಾಷ್ಟ್ರಪತಿಯವರು ತುರ್ತುಪರಿಸ್ಥಿತಿಯನ್ನು ಘೋಷಿಸುವ ಮೂರು ಸಂದರ್ಭಗಳಾವುವು ?

25) ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳೇನು ?

26) ಭಾರತದಲ್ಲಿ ಜನಸಂಖ್ಯಾ ಹೆಚ್ಚಳಕ್ಕೆ ಕಾರಣಗಳೇನು ?

27) ಭಾರತದ ಸಾಂಸ್ಕೃತಿಕ ಹಿರಿಮೆಯನ್ನು ರಕ್ಷಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ತಿಳಿಸಿ.

28) ಬಾಕ್ಸೈಟಿನ ಉಪಯೋಗಗಳನ್ನು ತಿಳಿಸಿ.

29) ಪ್ರಮುಖ ಕೃಷಿ ಆಧಾರಿತ ಕೈಗಾರಿಗಳನ್ನು ಹೆಸರಿಸಿ.

30) 'ಇಂದಿನ ದಿನಗಳಲ್ಲಿ ಕಂಪ್ಯೂಟರ್ ಪ್ರಾಮುಖ್ಯತೆ ಎಲ್ಲಾ ಕ್ಷೇತ್ರಗಳಲ್ಲೂ ಹೆಚ್ಚಿದೆ.' ಈ ಹೇಳಿಕೆಯನ್ನು ಸಮರ್ಥಿಸಿ.

31) ರಸ್ತೆ ಮಾರ್ಗಗಳಿಂದಾಗುವ ಯಾವುದಾದರೂ ನಾಲ್ಕು ಉಪಯೋಗಗಳನ್ನು ತಿಳಿಸಿ.

32) ಜಾಗತೀಕರಣದಿಂದುಂಟಾಗುವ ಯಾವುದಾದರೂ ಮೂರು ಪರಿಣಾಮಗಳನ್ನು ತಿಳಿಸಿ.

33) ಕೈಗಾರಿಕಾ ಕ್ರಾಂತಿಯಿಂದಾದ ಉತ್ತಮ ಪರಿಣಾಮಗಳೇನು ?

34) 'ಹಿಜಿರಾ' ಇದರ ಮಹತ್ವವೇನು ?

35) ಗುಪ್ತರ ಯುಗವನ್ನು 'ಸುವರ್ಣಯುಗ' ಎಂದು ಏಕೆ ಕರೆಯಲಾಗುತ್ತದೆ ?

VI. ಈ ಕೆಳಗಿನ ಪ್ರತಿಯೊಂದೂ ಪ್ರಶ್ನೆಗಳಿಗೂ ***ಐದು*** ಅಥವಾ ***ಆರು*** ವಾಕ್ಯಗಳಲ್ಲಿ ಉತ್ತರಿಸಿ :

$10 \times 3 = 30$

36) ಭಾರತದ ಸ್ವದೇಶಿ ಮತ್ತು ಬಹಿಷ್ಕಾರ ಚಳುವಳಿಯ ಸ್ವರೂಪವನ್ನು ವಿವರಿಸಿ.

37) ಸ್ವಾಮಿ ದಯಾನಂದ ಸರಸ್ವತಿಯವರು ಸಮಾಜ ಸುಧಾರಣೆಗೆ ಕೈಗೊಂಡ ಪ್ರಮುಖ ಕಾರ್ಯಗಳನ್ನು ವಿವರಿಸಿ.

38) ಪ್ಲಾಸಿ ಕದನದ ಪರಿಣಾಮಗಳನ್ನು ಬರೆಯಿರಿ.

39) ರಾಷ್ಟ್ರಗಳ ಒಕ್ಕೂಟದ ಪ್ರಮುಖ ಗುರಿಗಳು ಯಾವುವು ?

40) ಭತ್ತ ಬೆಳೆಯಲು ಬೇಕಾಗುವ ಭೌಗೋಳಿಕ ಅಂಶಗಳನ್ನು ತಿಳಿಸಿ.

41) ಮಲಿನಗೊಳ್ಳುತ್ತಿರುವ ನದಿಯ ನೀರನ್ನು ಶುದ್ಧೀಕರಿಸಲು ಕೈಗೊಳ್ಳಬಹುದಾದ ಕ್ರಮಗಳೇನು ?

42) ಜಾತಿ ಪದ್ಧತಿಯ ಪ್ರಮುಖ ಲಕ್ಷಣಗಳನ್ನು ಪಟ್ಟಿಮಾಡಿ.

43) 'ಭಾರತೀಯರು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದ್ದೇವೆ'. ಈ ಹೇಳಿಕೆಯನ್ನು ಸಮರ್ಥಿಸಿ.

44) ಮಾನವನ ಮೂಲಭೂತ ಹಕ್ಕುಗಳನ್ನು ಹೆಸರಿಸಿ.

45) ಉತ್ತಮ ಪೌರನಲ್ಲಿರಬೇಕಾದ ಗುಣಲಕ್ಷಣಗಳೇನು ?

VII. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೂ **ಹತ್ತು** ವಾಕ್ಯಗಳಲ್ಲಿ ಉತ್ತರ ಬರೆಯಿರಿ : 4 × 4 = 16

46) ಅಸಹಕಾರ ಚಳುವಳಿಯ ಸ್ವರೂಪವನ್ನು ವಿವರಿಸಿ.

47) ಇತ್ತೀಚಿನ ದಿನಗಳಲ್ಲಿ ಭಾರತದ ಮಣ್ಣು ಬರಡಾಗುತ್ತಿದೆ. ಇದನ್ನು ತಡೆಯಲು ಕೈಗೊಳ್ಳಬಹುದಾದ ಕ್ರಮಗಳನ್ನು ಸ್ಪಷ್ಟೀಕರಿಸಿ.

48) ಜನಸಾಂದ್ರತೆಯ ಮೇಲೆ ಪ್ರಭಾವ ಬೀರುವ ಪ್ರಮುಖ ಭೌಗೋಳಿಕ ಅಂಶಗಳು ಯಾವುವು ?

49) ಗ್ರಾಮ ಪಂಚಾಯತಿಯ ಪ್ರಮುಖ ಕಾರ್ಯಗಳನ್ನು ವಿವರಿಸಿ.

VIII. 50) ಭಾರತದ ಒಂದು ಅಂದವಾದ ನಕ್ಷೆಯನ್ನು ಬರೆದು, ಕೆಳಗೆ ಸೂಚಿಸಿರುವ ಸ್ಥಳಗಳನ್ನು ಗುರುತಿಸಿ : 1 + 3 = 4

a) ಗಂಗಾ ನದಿ

b) ಮುಂಬೈ

c) ಕರ್ಕಾಟಕ ಸಂಕ್ರಾಂತಿ ವೃತ್ತ